# ಅಮಿತಾಭ್ - ರೇಖಾ ಸಿನಿಮಾ!



‘ಸೂಪರ್ ನಾನಿ’ ಚಿತ್ರದಲ್ಲಿ ನಟಿ ರೇಖಾ, ಅಮಿತಾಭ್ ಬಚ್ಚನ್‌ರನ್ನು ಅನುಕರಿಸಿದ್ದು ಸುದ್ದಿಯಾಗಿತ್ತು. ‘ಈ ಮಾಜಿ ಪ್ರೇಮಿಗಳ ವಿರಸ ಶಮನವಾಗಿದೆ, ಇಬ್ಬರೂ ಮತ್ತೆ ಒಂದಾಗಿ ತೆರೆ ಹಂಚಿಕೊಳ್ಳಲಿದ್ದಾರೆ’ ಎಂಬ ಮಾತುಗಳೂ ಕೇಳಿಬರುತ್ತಿತ್ತು. ಈಗ ಆ ಸುದ್ದಿ ನಿಜವಾಗಿದೆ. ಒಂದು ಕಾಲದ ಪ್ರೇಮಪಕ್ಷಿಗಳು ಮತ್ತೆ ತೆರೆ ಹಂಚಿಕೊಳ್ಳುವ ಕಾಲ ಸನ್ನಿಹಿತವಾಗಿದೆ. ಇದನ್ನು ಸ್ವತಃ ಅಮಿತಾಭ್ ಬಚ್ಚನ್ ಬಹಿರಂಗಪಡಿಸಿದ್ದಾರೆ.

ಬರೋಬ್ಬರಿ ಮೂರು ದಶಕಗಳಿಂದ ರೇಖಾರಿಂದ ದೂರವುಳಿದಿದ್ದು ಮಾತ್ರವಲ್ಲ, ಅವರ ಕುರಿತು ಮಾತನ್ನೂ ಆಡದ ಬಚ್ಚನ್, ಅವರೆಡೆಗಿನ ಮೌನ ಮುರಿದಿದ್ದಾರೆ. ‘ಶಮಿತಾಭ್’ ನಿರ್ದೇಶಕ ಆರ್. ಬಾಲ್ಕಿ, ಇಬ್ಬರನ್ನೂ ಮತ್ತೆ ಒಂದು ಮಾಡುವ ಬಯಕೆ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಸೂಕ್ತ ಸಿದ್ಧತೆಯನ್ನೂ ನಡೆಸಿದ್ದಾರೆ. ಅಂದ ಹಾಗೆ, ‘ಶಮಿತಾಭ್’ ಚಿತ್ರದಲ್ಲಿಯೂ ಅಮಿತಾಭ್ ಮತ್ತು ರೇಖಾ ನಟಿಸಿದ್ದಾರೆ. ಆದರೆ ಎಲ್ಲಿಯೂ ಅವರು ಒಟ್ಟಿಗೆ ತೆರೆ ಹಂಚಿಕೊಂಡಿಲ್ಲ. ಇಬ್ಬರೂ ಎದುರಾಗುವ ಸನ್ನಿವೇಶ ಚಿತ್ರದಲ್ಲಿಲ್ಲ. ಅದಕ್ಕೆಂದೇ ತಮ್ಮ ಮುಂದಿನ ಚಿತ್ರದಲ್ಲಿ ಈ ಜನಪ್ರಿಯ ಜೋಡಿಯನ್ನು ಒಂದು ಮಾಡುವ ತವಕ ನಿರ್ದೇಶಕರದು.

‘ಬಾಲ್ಕಿ, ನನ್ನ ಮತ್ತು ರೇಖಾ ಜೋಡಿಯ ಸಿನಿಮಾ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆ! ಯಾರಾದರೂ ಅದಕ್ಕೆ ಸೂಕ್ತವಾದ ಕಥೆ ಹೊಂದಿದ್ದರೆ, ಅದು ಏಕಾಗಬಾರದು?’ ಎಂದಿರುವ ಅಮಿತಾಭ್, ಮಾತುಗಳಲ್ಲಿ ರೇಖಾ ಅವರೊಂದಿಗೆ ಮತ್ತೆ ನಟಿಸುವ ಉತ್ಸಾಹ ಕಾಣುತ್ತದೆ. ‘ರೇಖಾ ಅವರಂತಹ ನಟಿಯೊಂದಿಗೆ ನಟಿಸುವುದು ಖುಷಿಯ ವಿಚಾರ’ ಎಂದಿದ್ದಾರೆ ಅವರು.

70–80ರ ದಶಕದ ಈ ಜನಪ್ರಿಯ ಜೋಡಿ, ರೂಮರ್‌ಗಳ ಕಾರಣದಿಂದ ದೂರಾಗಿತ್ತು. 1981ರಲ್ಲಿ ನಟಿಸಿದ್ದ ‘ಸಿಲ್‌ಸಿಲಾ’ ಈ ಜೋಡಿಯ ಕೊನೆಯ ಚಿತ್ರ. ಅಲ್ಲಿಂದ ಇಬ್ಬರೂ ತೆರೆ ಮೇಲೆ ಮಾತ್ರವಲ್ಲ, ಸಾರ್ವಜನಿಕವಾಗಿಯೂ ಜತೆಯಾಗಿ ಕಾಣಿಸಿಕೊಳ್ಳದೆ ದೂರವೇ ಉಳಿದಿದ್ದರು. ಇತ್ತೀಚೆಗೆ ಪ್ರಶಸ್ತಿ ಸಮಾರಂಭವೊಂದರಲ್ಲಿ ಬಚ್ಚನ್ ದಂಪತಿ, ರೇಖಾ ಜತೆ ಆತ್ಮೀಯವಾಗಿ ಹರಟುವ ಮೂಲಕ ಮೂರು ದಶಕದ ಶೀತಲ ಸಮರಕ್ಕೆ ಅಂತ್ಯ ಹಾಡಿದ್ದರು. ಈಗ ಇಬ್ಬರೂ 80ರ ದಶಕದ ಜನಪ್ರಿಯತೆಯನ್ನು ಹೊಸ ತಲೆಮಾರಿನ ಪ್ರೇಕ್ಷಕರಿಗೂ ದಾಟಿಸುವ ಮನಸು ಮಾಡಿದ್ದಾರೆ. ಅದಕ್ಕಾಗಿ ಕಾಯುತ್ತಿರುವ ಅಭಿಮಾನಿಗಳ ವರ್ಗವೂ ದೊಡ್ಡದಿದೆ.

## ಬಿಪಾಶಾ ಆತ್ಮವಿಮರ್ಶೆ



ನಟ ಅಥವಾ ನಟಿಯೇ ಆಗಿರಲಿ, ಬಾಲಿವುಡ್‌ನ ಎಲ್ಲಾ ಯಶಸ್ವಿ ಕಲಾವಿದರೂ ಒಂದೇ ಪ್ರಕಾರದ ಪಾತ್ರಗಳಿಗೆ ಅಂಟಿಕೊಳ್ಳುತ್ತಿದ್ದಾರೆ– ಇದು ಕಲಾವಿದರ ಸಿನಿಮಾ ಆಯ್ಕೆ ಕುರಿತ ಬಿಪಾಶಾ ಬಸು ಅಭಿಪ್ರಾಯ. ಈ ಬಗೆಯ ಕಲಾವಿದರ ಪಟ್ಟಿಯಲ್ಲಿ ಅವರು ತಮ್ಮನ್ನೂ ಸೇರಿಸಿಕೊಂಡಿದ್ದಾರೆ. ಹಾರರ್ ಚಿತ್ರಗಳ ಏಕತಾನತೆಯ ಪಾತ್ರಗಳಲ್ಲಿಯೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಬಿಪಾಶಾ, ಪ್ರೇಕ್ಷಕರು ಅದೇ ರೀತಿಯ ಪಾತ್ರಗಳಲ್ಲಿ ತಮ್ಮನ್ನು ಮೆಚ್ಚಿಕೊಂಡರೆ ಇನ್ನೇನು ಮಾಡುವುದು ಎಂಬ ಹತಾಶೆಯ ಮಾತನ್ನೂ ಆಡುತ್ತಾರೆ.

ಅವರ ಈ ಪಟ್ಟಿಯಿಂದ ವಿನಾಯ್ತಿ ನೀಡಿರುವ ನಟಿಯ ಹೆಸರೂ ಇದೆ. ಬಿಪ್ಸ್ ಪ್ರಕಾರ ಏಕತಾನತೆಯ ಪಾತ್ರದ ಮರ್ಜಿಗೆ ಬೀಳದ ಏಕೈಕ ನಟಿ ಎಂದರೆ ಪ್ರಿಯಾಂಕಾ ಚೋಪ್ರಾ. ಹಾಗೆಯೇ ‘ನಟಿಯೊಬ್ಬರು ಪಂಜಾಬಿ ಯುವತಿಯ ಪಾತ್ರಕ್ಕೇ ಜೋತುಬಿದ್ದಿದ್ದಾರೆ’ ಎಂದು ಪರೋಕ್ಷವಾಗಿ ಸೋನಾಕ್ಷಿ ಸಿನ್ಹಾರ ಕಾಲು ಎಳೆದಿದ್ದಾರೆ. ‘ಪ್ರಿಯಾಂಕಾ ಚೋಪ್ರಾ ಹೊರತುಪಡಿಸಿ ಮತ್ಯಾವ ನಟಿಯೂ ಪಾತ್ರಗಳೊಂದಿಗೆ ಪ್ರಯೋಗಕ್ಕೆ ಮುಂದಾಗುತ್ತಿಲ್ಲ. ವಿಭಿನ್ನ ಮಾದರಿಯ ಸಿನಿಮಾಗಳ ಪ್ರಯತ್ನಕ್ಕೂ ಮುಂದಾಗುತ್ತಿಲ್ಲ. ಅದು ಅವರ ತಪ್ಪೂ ಅಲ್ಲ. ಉದಾಹರಣೆಗೆ ವಿದ್ಯಾ ಬಾಲನ್ ನಿರ್ದಿಷ್ಟ ಬಗೆಯ ಪಾತ್ರಗಳನ್ನೇ ಮಾಡಬೇಕಿದೆ. ಅದರ ಹೊರತಾಗಿ ಆಕೆ ವಿಭಿನ್ನ ಪಾತ್ರ ಮಾಡಿದರೆ ಜನ ಅದನ್ನು ತಿರಸ್ಕರಿಸುತ್ತಾರೆ. ನಾನು ಹಾರರ್ ಚಿತ್ರಗಳಲ್ಲಿ ನಟಿಸುವುದನ್ನು ಜನರು ಯಾಕೆ ವಿರೋಧಿಸುತ್ತಾರೆ ಎಂದು ಅರ್ಥವಾಗುತ್ತಿಲ್ಲ. ಕಡೇ ಪಕ್ಷ ನನ್ನ ಹಾರರ್ ಚಿತ್ರಗಳಲ್ಲಿ ಹೆಚ್ಚಿನವು ಯಶಸ್ಸು ಗಳಿಸಿವೆ’ ಎಂದಿದ್ದಾರೆ ಬಿಪಾಶಾ.

ಬರುವ ಅವಕಾಶಗಳಲ್ಲಿಯೇ ಉತ್ತಮವಾದುದ್ದನ್ನು ಆಯ್ದುಕೊಳ್ಳಬೇಕಿದೆ ಎನ್ನುವ ಬಿಪಾಶಾ, ಪಾತ್ರಗಳ ಆಯ್ಕೆಯಲ್ಲಿ ನಟಿಯರು ಎದುರಿಸುವ ಸಮಸ್ಯೆಗಳನ್ನು ಬಿಂಬಿಸುವುದರ ಜತೆಗೆ ಅದನ್ನು ಸಮರ್ಥಿಸುವ ಮಾತನ್ನೂ ಆಡುತ್ತಿರುವುದು ವಿಪರ್ಯಾಸ!

■ ಅಮಿ